
## ಟ್ರಂಕು ತಟ್ಟೆ




**ತುಮಕೂರು** ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಂಟಲಗೆರೆಯ ಗುರುಪ್ರಸಾದ್ ಸಮಕಾಲೀನ ಕಥೆಗಾರರಲ್ಲಿ ಮುಖ್ಯರಾದವರು. ಗ್ರಾಮೀಣ ನೆಲೆಗಟ್ಟಿನಲ್ಲಿ ನಿಂತು, ದೀನದಲಿತರ ಬದುಕಿನ ನೋವು ನಲಿವುಗಳನ್ನು ಪರಿಣಾಮಕಾರಿ ಕಥೆಗಳಾಗಿಸುವ ಮೂಲಕ ಸಹೃದಯರ ಗಮನಸೆಳೆದವರು. ಅವರ ಹೊಸ ಕೃತಿ 'ಟ್ರಂಕು ತಟ್ಟೆ' ಹಾಸ್ಟೆಲ್ ಅನುಭವಗಳನ್ನು ಆಧರಿಸಿದ ಕೃತಿ. ಕನ್ನಡ ಸಾಹಿತ್ಯಕ್ಕೆ ಅಷ್ಟೇನೂ ಚಿರಪರಿಚಿತವಲ್ಲದ ಹಾಸ್ಟೆಲ್ ವಾಸದ ಅನುಭವಗಳ ನಿರೂಪಣೆ ಎನ್ನುವ ಕಾರಣದಿಂದಲೂ ಈ ಕೃತಿ ಗಮನಸೆಳೆಯುತ್ತದೆ.

'ಟ್ರಂಕು ತಟ್ಟೆ' ಗುರುಪ್ರಸಾದ್‌ರ ವಿದ್ಯಾರ್ಥಿ ಜೀವನದ ಹಾಸ್ಟೆಲ್ ವಾಸದ ಅನುಭವಗಳ ಗುಚ್ಛವಾಗಿದ್ದರೂ, ಇದು ಅಕ್ಷರ ಕಲಿಕೆಗಾಗಿ ಹೋರಾಟ ನಡೆಸುವ ಎಲ್ಲ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಬದುಕಿನ ಕಥನವೂ ಆಗಿದೆ. ಸರ್ಕಾರಿ ವಿದ್ಯಾರ್ಥಿನಿಲಯಗಳ ಸ್ಥಿತಿಗತಿಯನ್ನೂ ಅನಾವರಣಗೊಳಿಸುವ 'ಟ್ರಂಕು ತಟ್ಟೆ' ನಮ್ಮ ಶಿಕ್ಷಣ ಹಾಗೂ ಸಾಮಾಜಿಕ ವ್ಯವಸ್ಥೆ ಮತ್ತಷ್ಟು ಮಾನವೀಯವಾಗಬೇಕಾದ ಅಗತ್ಯವನ್ನು ಮನಗಾಣಿಸುತ್ತದೆ. ತಮ್ಮ ಬದುಕನ್ನು ಅಂತರ ಕಾಪಾಡಿಕೊಂಡು ನೋಡುವುದು ಲೇಖಕರಿಗೆ ಸಾಧ್ಯವಾಗಿರುವುದರಿಂದ, ಈ ಕಥನಕ್ಕೆ ವಿಶೇಷ ಅಧಿಕೃತತೆ ಪ್ರಾಪ್ತವಾಗಿದೆ.

**ಲೇ: ಗುರುಪ್ರಸಾದ್ ಕಂಟಲಗೆರೆ; ಪು: 136; ಬೆ: ₹ 180; ಪ್ರ: ಚೈತನ್ಯ ಪ್ರಕಾಶನ, ತುಮಕೂರು.**
**ಫೋ: 9964076203**

## ಕಾವ್ಯ ಕಾರಣ




**ಬಂದೀಖಾನೆ** ಇಲಾಖೆಯಲ್ಲಿ ಸಹಾಯಕ ಅಧೀಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿರುವ ಅಂಬರೀಷ್ ಎಸ್. ಪೂಜಾರಿ ಅವರ ಮೂರನೇ ಕವನ ಸಂಕಲನ 'ಕಾವ್ಯ ಕಾರಣ'. ಕೈದಿಗಳ ಜೊತೆಗಿನ ಒಡನಾಟದ ತವಕತಲ್ಲಣಗಳೇ ಇಲ್ಲಿನ ಕವಿತೆಗಳ ಕೇಂದ್ರಬಿಂದು. ಕಾರಾಗೃಹ ಎನ್ನುವುದು ಕವಿಯ ಪಾಲಿಗೆ ತಪ್ಪಿತಸ್ಥರನ್ನು ಸಮಾಜದ ಮುಖ್ಯ ವಾಹಿನಿಯಿಂದ ಬೇರ್ಪಡಿಸಿ ಕೂಡಿಹಾಕಿರುವ ಸೆರೆಮನೆಯಷ್ಟೇ ಅಲ್ಲ; ಅದು ಕತ್ತಲು ಮತ್ತು ಬೆಳಕಿನ ನಡುವಿನ ವ್ಯತ್ಯಾಸದ ಅರಿವನ್ನು ಮೂಡಿಸುವ ಬೋಧಿಯೂ ಹೌದು. ಸಂಕಲನದ ಮೊದಲ ಕವಿತೆ 'ಕೃಷ್ಣಗೃಹ'ದಲ್ಲಿನ 'ಕತ್ತಲೆಯಲ್ಲಿ ಬೆಳಕು ಕೊಟ್ಟವನಿಗಾಗಿ ಕಾಯುತ್ತಿದೆ ಕೃಷ್ಣಗೃಹ' ಎನ್ನುವ ಹಂಬಲವೇ ಇಲ್ಲಿನ ಎಲ್ಲ ಕವಿತೆಗಳ ಅಪೇಕ್ಷೆಯೂ ಆಗಿದೆ.

ಆರೋಗ್ಯಕರ ಸಮಾಜದ ಹಂಬಲವನ್ನೇ ಬರಹವನ್ನಾಗಿಸುವ ಅಂಬರೀಷ್ ಅವರು, ಲಯಬದ್ಧ ಸಾಲುಗಳನ್ನು ಕಟ್ಟಬಲ್ಲರು. ಬರವಣಿಗೆಯ ಮೂಲಕ ಹೃದಯಸಂವಾದ ಮತ್ತು ಹೃದಯ ಪರಿವರ್ತನೆಯ ಅವರ ಉದ್ದೇಶವೂ ಒಳ್ಳೆಯದೇ. ಆದರೆ, ಬಹುತೇಕ ಸಂದರ್ಭಗಳಲ್ಲಿ ಅವರ ಆಶಯ ಮಾತುಗಳಲ್ಲಿ, ಹೇಳಿಕೆಗಳಲ್ಲಿ ಮುಗಿದುಹೋಗುತ್ತದೆ. ಕಾವ್ಯದ ಹದ ಮತ್ತು ಸೌಂದರ್ಯವನ್ನು ದಕ್ಕಿಸಿಕೊಳ್ಳುವ ನಿಟ್ಟಿನಲ್ಲಿ ಅವರು ನಡೆಯಬೇಕಾದ ದಾರಿ ದೀರ್ಘವಾದುದು.

**ಲೇ: ಅಂಬರೀಷ್ ಎಸ್. ಪೂಜಾರಿ; ಪು: 116, ಬೆ: ₹ 100; ಪ್ರ: ಜ್ಯೋತಿ ಪ್ರಕಾಶನ, ವಿಜಯಪುರ.**
**ಫೋ: 9480115444**